ಅನುಬಂಧ – III

ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2010
(2010ರ ವಿಧಾನಸಭೆಯ ವಿಧೇಯಕ ಸಂಖ್ಯೆ 10)

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು (2004ರ ಕರ್ನಾಟಕ ಅಧಿನಿಯಮ 32) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2010 ಎಂದು ಕರೆಯತಕ್ಕದ್ದು.

(2) ಇದು 2010ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. 4ನೇ ಪ್ರಕರಣದ ತಿದ್ದುಪಡಿ.– ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003 ರಲ್ಲಿ (2004 ರ ಕರ್ನಾಟಕ ಅಧಿನಿಯಮ 32) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 4ನೇ ಪ್ರಕರಣದಲ್ಲಿ,–

(i) (1)ನೇ ಉಪ–ಪ್ರಕರಣದಲ್ಲಿ,–

(ಎ) (ಎ) ಖಂಡದ (ii) ನೇ ಉಪ–ಖಂಡದಲ್ಲಿ "ಶೇಕಡ ನಾಲ್ಕರ" ಎಂಬ ಪದಗಳಿಗೆ "30ನೇ ಕ್ರಮಸಂಖ್ಯೆಯಲ್ಲಿ ನಿರ್ದಿಷ್ಟಪಡಿಸಿದ ಸರಕುಗಳ ಸಂಬಂಧದಲ್ಲಿ ಶೇಕಡ ನಾಲ್ಕರ ಮತ್ತು ಇತರ ಸರಕುಗಳ ಸಂಬಂಧದಲ್ಲಿ

ಶೇಕಡ ಐದರ ದರದಲ್ಲಿ" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (ಬಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಬಿ) (i) ಸಿಗರೇಟುಗಳು, ಸಿಗಾರುಗಳು, ಗುಟ್ಕಾ ಮತ್ತು ಇತರ ತಂಬಾಕು ತಯಾರಿಕೆಗಳ ಸಂಬಂಧದಲ್ಲಿ ಶೇಕಡ ಹದಿನೈದರ ದರದಲ್ಲಿ;

(ii) ಇತರ ಸರಕುಗಳ ಸಂಬಂಧದಲ್ಲಿ ಶೇಕಡ ಹದಿಮೂರುವರೆ ದರದಲ್ಲಿ,"

(ii) (3)ನೇ ಉಪ–ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(3–ಎ) (3)ನೇ ಉಪ–ಪ್ರಕರಣದ ಅಡಿಯಲ್ಲಿ ಹೊರಡಿಸಿದ ಯಾವುದೇ ಅಧಿಸೂಚನೆಯು, ಈ ಅಧಿನಿಯಮಕ್ಕೆ ತಿದ್ದುಪಡಿಯನ್ನು ಮಾಡುವ ಮೂಲಕ ನಿರ್ದಿಷ್ಟಪಡಿಸಿದ ಯಾವುದೇ ಸರಕುಗಳ ಸಂಬಂಧದಲ್ಲಿ ಸಂದಾಯ ಮಾಡತಕ್ಕ ತೆರಿಗೆಯನ್ನು ಮಾರ್ಪಾಡು ಮಾಡಿದಾಗ್ಯೂ, ಅದನ್ನು ರದ್ದುಗೊಳಿಸುವವರೆಗೆ ಅಥವಾ ಮಾರ್ಪಾಡುಗೊಳಿಸುವವರೆಗೆ ಸಿಂಧುವಾಗಿರತಕ್ಕದ್ದು,"

(iii) (4)ನೇ ಉಪ–ಪ್ರಕರಣದಲ್ಲಿ "ಮೂರನೇ ಅನುಸೂಚಿಯ" ಎಂಬ ಪದಗಳಿಗೆ ಮೊದಲು "ಯಾವುದೇ ಸರಕುಗಳ ಅಥವಾ" ಎಂಬ ಪದಗಳನ್ನು ಸೇರಿಸತಕ್ಕದ್ದು.

(iv) (4)ನೇ ಉಪ–ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(5) (1)ನೇ ಉಪ–ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಒಬ್ಬ ನೋಂದಾಯಿತ ವ್ಯಾಪಾರಿಯು ಸಿಗರೇಟುಗಳು, ಸಿಗಾರಗಳು, ಗುಟ್ಕಾ ಮತ್ತು ಇತರ ತಂಬಾಕು ತಯಾರಿಕೆಗಳ ಮಾರಾಟದ ಮೇಲೆ, ಅವುಗಳ ಧಾರಕ ಅಥವಾ ಅವುಗಳ ಪ್ಯಾಕ್‌ಗಳ ಮೇಲಿರುವ ಲೇಬಲಿನಲ್ಲಿ ನಮೂದಿಸಿದ ಗರಿಷ್ಠ ಚಿಲ್ಲರೆ ಬೆಲೆಯ ಮೇಲೆ, ಅಂಥ ಗರಿಷ್ಠ ಚಿಲ್ಲರೆ ಬೆಲೆಯಲ್ಲಿ ಸಂದಾಯ

ಮಾಡತಕ್ಕ ತೆರಿಗೆಗೆ ಸಮಾನದ ಮೊತ್ತವನ್ನು ಮಾಡತಕ್ಕ ಒಟ್ಟು ಮೊಬಲಗು ಐದು ನೂರು ರೂಪಾಯಿಗಳು ಅಥವಾ ಆಯುಕ್ತರು ಅಧಿಸೂಚಿಸಬಹುದಾದಂತೆ ಯಾವುದೇ ಹೆಚ್ಚಿನ ಮೊಬಲಗನ್ನು ಮೀರಿದ್ದಲ್ಲಿ, ತೆರಿಗೆಯನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು.

(6) ಆತನು ಖರೀದಿಸಿದ ಸರಕುಗಳ ಸಂಬಂಧದಲ್ಲಿ (5)ನೇ ಉಪ–ಪ್ರಕರಣದ ಅನುಸಾರವಾಗಿ ತೆರಿಗೆಯನ್ನು ಸಂಗ್ರಹಿಸಿದ್ದಲ್ಲಿ,–

(ಎ) ಯಾವ ನೋಂದಾಯಿತ ವ್ಯಾಪಾರಿಯ ಅಂಥ ಸರಕುಗಳ ಮಾರಾಟವು (5)ನೇ ಉಪ–ಪ್ರಕರಣದ ಅಡಿಯಲ್ಲಿ ತೆರಿಗೆಗೆ ಬದ್ಧವಾಗಿಲ್ಲವೋ ಆ ವ್ಯಾಪಾರಿಯು, ಅಂಥ ಸರಕುಗಳ ಮಾರಾಟಕ್ಕೆ ಸಂಬಂಧಿಸಿದಂತೆ, ಆತನ ವಹಿವಾಟಿನ ಮೇಲೆ ಸಂದಾಯ ಮಾಡಬೇಕಾದ ತೆರಿಗೆಗಿಂತ ಹೆಚ್ಚಾಗಿ, ಆತನ ಖರೀದಿಯ ಮೇಲೆ ಸಂಗ್ರಹಿಸಿದ ತೆರಿಗೆಯ ಯಾವುದೇ ಮೊಬಲಗಿನ ಮರುಪಾವತಿಗಾಗಿ ಅಥವಾ ಹೊಂದಾಣಿಕೆಗಾಗಿ ಅರ್ಹನಾಗಿರತಕ್ಕದ್ದು ಮತ್ತು ಸದರಿ ಉಪ–ಪ್ರಕರಣದ ಅನುಸಾರವಾಗಿ ತೆರಿಗೆಯನ್ನು ಸಂಗ್ರಹಿಸಲಾಗಿದೆಂದು ಮತ್ತು ಸಂದಾಯ ಮಾಡಲಾಗಿದೆಂದು ರುಜುವಾತು ಪಡಿಸುವ ಭಾರವು ಅಂಥ ವ್ಯಾಪಾರಿಯ ಮೇಲೆ ಇರತಕ್ಕದ್ದು;

(ಬಿ) ಅಧಿನಿಯಮದಡಿಯಲ್ಲಿ ನೋಂದಾಯಿತನಾಗಲು ಬದ್ಧನಾದ ವ್ಯಾಪಾರಿಯಲ್ಲದ ಒಬ್ಬ ವ್ಯಕ್ತಿಯು, ನೇಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು, ಅಂಥ ಮಾರಾಟ ಮಾಡುವ ವ್ಯಾಪಾರಿಗೆ ತಾನು ಸಂದಾಯ ಮಾಡಿದ ಪ್ರತಿಫಲದ ಮೇಲೆ ಸಂದಾಯ ಮಾಡಬೇಕಾದ ತೆರಿಗೆಗಿಂತ ಹೆಚ್ಚಿಗೆಯಾಗಿ ಅಂಥ ವ್ಯಾಪಾರಿಯು ಸಂದಾಯ ಮಾಡಿದ ಯಾವುದೇ ಮೊಬಲಗಿನ ಮರುಪಾವತಿಗಾಗಿ ಕ್ಲೇಮು ಮಾಡಬಹುದು."

3. 5ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 5ನೇ ಪ್ರಕರಣದಲ್ಲಿ (1)ನೇ ಉಪ–ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(1–ಎ) (1)ನೇ ಉಪ–ಪ್ರಕರಣದ ಅಡಿಯಲ್ಲಿ ಹೊರಡಿಸಿದ ಯಾವುದೇ ಅಧಿಸೂಚನೆಯು, ಈ ಅಧಿನಿಯಮಕ್ಕೆ ತಿದ್ದುಪಡಿಯನ್ನು ಮಾಡುವ ಮೂಲಕ ನಿರ್ದಿಷ್ಟಪಡಿಸಿದ ಯಾವುವೇ ಸರಕುಗಳ ಸಂಬಂಧದಲ್ಲಿ

ಸಂದಾಯ ಮಾಡತಕ್ಕ ತೆರಿಗೆಯನ್ನು ಮಾರ್ಪಾಡು ಮಾಡಿದಾಗ್ಯೂ, ಅದನ್ನು ರದ್ದುಗೊಳಿಸುವವರೆಗೆ ಅಥವಾ ಮಾರ್ಪಾಡುಗೊಳಿಸುವವರೆಗೆ ಸಿಂಧುವಾಗಿರತಕ್ಕದ್ದು."

4. 18ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 18ನೇ ಪ್ರಕರಣದ (2)ನೇ ಉಪ–ಪ್ರಕರಣದಲ್ಲಿ "ಎರಡು ಲಕ್ಷ ರೂಪಾಯಿಗಳಿಗಿಂತ" ಎಂಬ ಪದಗಳಿಗೆ "ಐದು ಲಕ್ಷ ರೂಪಾಯಿಗಳಿಗಿಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

5. 18ಎ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 18ಎ ಪ್ರಕರಣದ (5)ನೇ ಉಪ–ಪ್ರಕರಣದಲ್ಲಿ "ಈ ಉಪಪ್ರಕರಣದ ಉಪಬಂಧಗಳನ್ನು" ಎಂಬ ಪದಗಳಿಗೆ "(4)ನೇ ಉಪ–ಪ್ರಕರಣದ ಉಪಬಂಧಗಳನ್ನು" ಎಂಬ ಪದಗಳು, ಆವರಣ ಚಿಹ್ನೆಗಳು ಮತ್ತು ಅಂಕಿಯನ್ನು ಪ್ರತಿಯೋಜಿಸತಕ್ಕದ್ದು.

6. 22ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 22ನೇ ಪ್ರಕರಣದಲ್ಲಿ,–

(i) (1)ನೇ ಉಪ–ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

(ii) (2)ನೇ ಉಪ–ಪ್ರಕರಣದಲ್ಲಿ "ಎರಡು ಲಕ್ಷ ರೂಪಾಯಿಗಳನ್ನು" ಎಂಬ ಪದಗಳಿಗೆ "ಐದು ಲಕ್ಷ ರೂಪಾಯಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iii) (3)ನೇ ಉಪ–ಪ್ರಕರಣದಲ್ಲಿ "ಹದಿನೈದು ಸಾವಿರ ರೂಪಾಯಿಗಳನ್ನು" ಎಂಬ ಪದಗಳಿಗೆ "ನಲವತ್ತು ಸಾವಿರ ರೂಪಾಯಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

7. 27ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 27ನೇ ಪ್ರಕರಣದ (1)ನೇ ಉಪ–ಪ್ರಕರಣದ (ಸಿ) ಖಂಡದಲ್ಲಿ "ಎರಡು ಲಕ್ಷ ರೂಪಾಯಿಗಳನ್ನು" ಎಂಬ ಪದಗಳಿಗೆ "ಐದು ಲಕ್ಷ ರೂಪಾಯಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

8. 31ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 31ನೇ ಪ್ರಕರಣದ (4)ನೇ ಉಪ–ಪ್ರಕರಣದಲ್ಲಿ,–

(i) "ನಲವತ್ತು ಲಕ್ಷ ರೂಪಾಯಿಗಳನ್ನು" ಎಂಬ ಪದಗಳಿಗೆ "ಅರವತ್ತು ಲಕ್ಷ ರೂಪಾಯಿಗಳನ್ನು ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, 2010ರ ಮಾರ್ಚ್ 31ನೇ ದಿನಾಂಕದಂದು ಕೊನೆಗೊಳ್ಳುವ ವರ್ಷದಲ್ಲಿ ಒಟ್ಟು ವಹಿವಾಟು ನಲವತ್ತು ಲಕ್ಷ ರೂಪಾಯಿಗಳನ್ನು ಮೀರುವ ಪ್ರತಿಯೊಬ್ಬ ವ್ಯಾಪಾರಿಯು ತನ್ನ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು."

9. 35ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 35ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ;–

"ಪರಂತು, ನಿರ್ದಿಷ್ಟಪಡಿಸಲಾದ ವರ್ಗದ ವ್ಯಾಪಾರಿಗಳು, ಆಯುಕ್ತರು ಅಧಿಸೂಚಿಸಬಹುದಾದಂತೆ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟ ಪಡಿಸಿದ ವಿದ್ಯುನ್ಮಾನ ವಿಧಾನದಲ್ಲಿ, ಅಂತರ್ಜಾಲ ಮೂಲಕ ನಿಯಮಿಸಲಾದ ನಮೂನೆಯಲ್ಲಿ ವಿವರ ಪಟ್ಟಿಗಳನ್ನು ತಯಾರಿಸಲು ವಿವರಗಳನ್ನು ಒದಗಿಸ ತಕ್ಕದ್ದು ಅಥವಾ ನಿಯಮಿಸಲಾದ ನಮೂನೆಯಲ್ಲಿ ವಿವರ ಪಟ್ಟಿಗಳನ್ನು ಸಲ್ಲಿಸತಕ್ಕದ್ದು;

ಮತ್ತು ಪರಂತು, ನಿರ್ದಿಷ್ಟಪಡಿಸಿದ ವರ್ಗದ ವ್ಯಾಪಾರಿಗಳು, ಆಯುಕ್ತರು ಅಧಿಸೂಚಿಸಬಹುದಾದಂತೆ ವಿವರ ಪಟ್ಟಿಗಳ ಆಧಾರದ ಮೇಲೆ ತೆರಿಗೆಯನ್ನು, ಅಮಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲ ಮೂಲಕ ಸಂದಾಯ ಮಾಡತಕ್ಕದ್ದು."

10. 53ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 53ನೇ ಪ್ರಕರಣದಲ್ಲಿ,–

(i) (2)ನೇ ಪ್ರಕರಣದಲ್ಲಿ,–

(ಎ) (ಸಿ) ಖಂಡದಲ್ಲಿ "ರಾಜ್ಯ ಸರ್ಕಾರದಿಂದ" ಎಂಬ ಪದಗಳ ತರುವಾಯ "ಅಥವಾ ಆಯುಕ್ತರಿಂದ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) (ಡಿ) ಖಂಡದಲ್ಲಿ "ರಾಜ್ಯ ಸರ್ಕಾರದಿಂದ" ಎಂಬ ಪದಗಳ ತರುವಾಯ "ಅಥವಾ ಆಯುಕ್ತರಿಂದ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (2)ನೇ ಉಪ–ಪ್ರಕರಣದ ತರುವಾಯ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(2–ಎ) (2)ನೇ ಉಪ–ಪ್ರಕರಣದ (ಸಿ) ಖಂಡದಲ್ಲಿ ಏನೇ ಒಳಗೊಂಡಿದ್ದರೂ, ಆಯುಕ್ತರು ಅಧಿಸೂಚಿಸಬಹುದಾದಂತೆ ಯಾವುದೇ ನಿರ್ದಿಷ್ಟಪಡಿಸಿದ ವರ್ಗದ ಸರಕುಗಳು ಅಥವಾ ಯಾವುದೇ ನಿರ್ದಿಷ್ಟಪಡಿಸಿದ ವರ್ಗದ ವ್ಯಾಪಾರಿಗಳಿಗೆ ಸೇರಿದ ಸರಕುಗಳು ಅಥವಾ ಯಾವುದೇ ನಿರ್ದಿಷ್ಟಪಡಿಸಿದ ವ್ಯವಹಾರಗಳಿಂದಾಗಿ ಸರಕುಗಳನ್ನು ಸಾಗಿಸುತ್ತಿರುವ ಸರಕು ಸಾಗಣೆ ವಾಹನಗಳ ಮಾಲೀಕ ಅಥವಾ ಪ್ರಭಾರದಲ್ಲಿರುವ ಒಬ್ಬ ವ್ಯಕ್ತಿಯು,–

(ಎ) ಸರಕುಗಳ ಸಾಗಾಣೆಯು ಪ್ರಾರಂಭವಾಗುವ ಸ್ಥಳದಿಂದ ಅವುಗಳನ್ನು ತಲುಪಿಸಬೇಕಾದ ರಾಜ್ಯದಲ್ಲಿಯ ಸ್ಥಳಕ್ಕೆ ಸಾಮಾನ್ಯವಾಗಿ ತೆಗೆದುಕೊಂಡು ಹೋಗುವ ಮಾರ್ಗದಲ್ಲಿ ಇರುವ ಚೆಕ್‌ಪೋಸ್ಟ್ ಅಥವಾ ಸುಂಕದಕಟ್ಟೆಯಲ್ಲಿ ವರದಿ ಮಾಡಿಕೊಳ್ಳತಕ್ಕದ್ದು;

(ಬಿ) (2)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಿಯ ಮುಂದೆ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಸರಕು ಕಳುಹಿಸುವವನಿಂದ ಅಥವಾ ಸರಕು ಸ್ವೀಕರಿಸುವವನಿಂದ ಸಾಗಿಸುತ್ತಿರುವ ಸರಕುಗಳ ವಿವರಗಳನ್ನು ವೆಬ್‌ಸೈಟ್‌ನಲ್ಲಿ ನಮೂದು ಮಾಡಿರುವ ರುಜು ವಾತನ್ನು ಸಲ್ಲಿಸತಕ್ಕದ್ದು; ಮತ್ತು

(ಸಿ) ಹಾಗೆ ಅದನ್ನು ಸಲ್ಲಿಸಿದ ತರುವಾಯ, ಅಧಿಕಾರಿಯು, ಸರಕು ವಾಹನವು ಮುಂದೆ ಸಾಗಲು ಅನುಮತಿಸಬಹುದು.

(2–ಬಿ) ಚೆಕ್‌ಪೋಸ್ಟ್ ಅಥವಾ ಸುಂಕದಕಟ್ಟೆಯ ಪ್ರಭಾರದಲ್ಲಿರುವ ಅಧಿಕಾರಿಗೆ ಅಥವಾ (2)ನೇ ಉಪ–ಪ್ರಕರಣದ ಅಡಿಯಲ್ಲಿ ಪ್ರಾಧಿಕೃತನಾದ ಅಧಿಕಾರಿಗೆ, (2–ಎ) ಉಪ–ಪ್ರಕರಣದ (ಎ) ಖಂಡದ ಉಪಬಂಧಗಳ ಯಾವುದೇ ಉಲ್ಲಂಘನೆಯಾಗಿದೆ ಎಂದು ಅಥವಾ ಅನುಸರಣೆಯಾಗಿಲ್ಲ ವೆಂದು ಅಥವಾ (2–ಎ) ಉಪ–ಪ್ರಕರಣದ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸ

ಲಾಗಿರುವಂತೆ ವಿವರಗಳನ್ನು ನಮೂದಿಸಿಲ್ಲವೆಂದು ಅಥವಾ ನಮೂದಿಸಿರುವ ವಿವರಗಳು ಸರಿಯಾಗಿಲ್ಲವೆಂದು ಮತ್ತು ಅಪೂರ್ಣವಾಗಿವೆಂದು ಹಾಗೂ ಅದಕ್ಕೆ ಸಾಕಷ್ಟು ಕಾರಣಗಳನ್ನು ಒದಗಿಸಿಲ್ಲವೆಂದು ತಿಳಿದುಬಂದರೆ, (12)ನೇ ಉಪ–ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ದಂಡವನ್ನು ವಿಧಿಸಲು ಆತನು ಮುಂದುವರೆಯತಕ್ಕದ್ದು."

(iii) (3)ನೇ ಉಪ–ಪ್ರಕರಣದಲ್ಲಿ "ಹತ್ತಿರದಲ್ಲಿರುವ ಚೆಕ್‌ಪೋಸ್ಟ್ ಅಥವಾ ಪೊಲೀಸ್ ಠಾಣೆಗೆ" ಎಂಬ ಪದಗಳಿಗೆ "ಹತ್ತಿರದಲ್ಲಿರುವ ಚೆಕ್ ಪೋಸ್ಟ್ ಅಥವಾ ವಾಣಿಜ್ಯ ತೆರಿಗೆಗಳ ಇಲಾಖೆಯ ಕಛೇರಿಗೆ ಅಥವಾ ಪೊಲೀಸ್ ಠಾಣೆಗೆ ಅಥವಾ ಆಯುಕ್ತರು ಅಧಿಸೂಚಿಸಬಹುದಾದಂಥ ಯಾವುದೇ ಇತರ ಸ್ಥಳಕ್ಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

11. 54ನೇ ಪ್ರಕರಣದ ತಿದ್ದುಪಡಿ.– ಮೂಲಅಧಿನಿಯಮದ 54ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ "52ನೇ ಪ್ರಕರಣದ (3)ನೇ ಉಪ–ಪ್ರಕರಣದ" ಎಂಬ ಅಂಕಿಗಳು, ಪದಗಳು ಮತ್ತು ಆವರಣ ಚಿಹ್ನೆಗಳಿಗೆ "53ನೇ ಪ್ರಕರಣದ" ಎಂಬ ಪದಗಳು ಮತ್ತು ಅಂಕಿಯನ್ನು ಪ್ರತಿಯೋಜಿಸತಕ್ಕದ್ದು ಮತ್ತು ಯಾವಾಗಲೂ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು.

12. ಹೊಸ 60ನೇ ಪ್ರಕರಣದ ಸೇರ್ಪಡೆ.– ಮೂಲಅಧಿನಿಯಮದ 59ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"60. ಸ್ಪಷ್ಟೀಕರಣ ಹಾಗೂ ಪೂರ್ವಭಾವಿ ನಿರ್ಣಯಗಳು.– (1) ಆಯುಕ್ತನು, ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಯಾವುದೇ ಪ್ರಕರಣ ಅಥವಾ ವರ್ಗಗಳ ಪ್ರಕರಣಗಳಲ್ಲಿ ಯಾವುದೇ ಸರಕುಗಳ ಸಂಬಂಧದಲ್ಲಿ ತೆರಿಗೆಯ ದರದ ಬಗ್ಗೆ ಅಥವಾ ಯಾವುದೇ ವ್ಯವಹರಣೆಯ ತೆರಿಗೆ ಬದ್ಧತೆಯ ಬಗ್ಗೆ ಅಥವಾ ಹೂಡುವಳಿ ತೆರಿಗೆಯ ಕಡಿತದ ಅರ್ಹತೆ ಬಗ್ಗೆ ಅಥವಾ ಅಧಿನಿಯಮದ ಅಡಿಯಲ್ಲಿ ಮೂಲದಲ್ಲಿಯೇ ತೆರಿಗೆ ಕಟಾಯಿಸುವ ಬದ್ಧತೆಯ ಬಗ್ಗೆ ಸ್ಪಷ್ಟೀಕರಣ ನೀಡಲು ಕನಿಷ್ಠ ಮೂವರು ಅಪರ ಆಯುಕ್ತರುಗಳನ್ನು ಒಳಗೊಂಡ "ಸೃಷ್ಟೀಕರಣ ಹಾಗೂ ಪೂರ್ವಭಾವಿ ನಿರ್ಣಯಗಳ ಪ್ರಾಧಿಕಾರ" ವನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ಸ್ಪಷ್ಟೀಕರಣ ಅಥವಾ ಪೂರ್ವಭಾವಿ ನಿರ್ಣಯವನ್ನು ಕೋರುವ ಯಾವೊಬ್ಬ ನೋಂದಾಯಿತ ವ್ಯಾಪಾರಿಯು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಅಂಥ ಶುಲ್ಕವನ್ನು ಸಂದಾಯ ಮಾಡಿದ ಬಗ್ಗೆ ರುಜುವಾತನ್ನು ಒಳಗೊಂಡಂತೆ ಅಂಥ ನಮೂನೆಯಲ್ಲಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(3) ಯಾವೊಬ್ಬ ಅಧಿಕಾರಿ ಅಥವಾ ಇಲಾಖೆಯ ಯಾವುದೇ ಇತರ ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧೀಕರಣವು, ಈ ಅಧಿನಿಯಮದ ಅಡಿಯಲ್ಲಿ ಯಾವ ಪ್ರಕರಣದ ಸಂಬಂಧದಲ್ಲಿ ಅರ್ಜಿದಾರನು ಅರ್ಜಿಯನ್ನು ಹಾಕಿಕೊಂಡಿರುವನೋ ಅದರ ಬಗ್ಗೆ ತೀರ್ಮಾನವನ್ನು ಕೈಗೊಳ್ಳಲು ಮುಂದುವರೆಯತಕ್ಕದ್ದಲ್ಲ.

(4) ಪ್ರಾಧಿಕಾರದ ಆದೇಶವು, ಸ್ಪಷ್ಟೀಕರಣವನ್ನು ಕೋರಿದ ಅರ್ಜಿದಾರನಿಗೆ ಮಾತ್ರ ಬಂಧಕವಾಗಿರತಕ್ಕದ್ದು ಮತ್ತು ಸ್ಪಷ್ಟೀಕರಣ ಕೋರಿರುವ ಸರಕುಗಳ ಅಥವಾ ವ್ಯವಹಾರದ ಸಂಬಂಧದಲ್ಲಿ ಮಾತ್ರ ಹಾಗೂ ಅಂಥ ಅರ್ಜಿದಾರನಿಗೆ ಸಂಬಂಧಿಸಿದಂತೆ ಆಯುಕ್ತರನ್ನು ಹೊರತುಪಡಿಸಿ ದಂತೆ ಇಲಾಖೆಯ ಅಧಿಕಾರಿಗಳ ಮತ್ತು ಅಪೀಲು ನ್ಯಾಯಾಧೀಕರಣದ ಮುಂದಿರುವ ನಡವಳಿಕೆಗಳಲ್ಲಿ ಮಾತ್ರ ಬಂಧಕವಾಗಿರತಕ್ಕದ್ದು.

(5) ಈ ಪ್ರಕರಣದ ಅಡಿಯಲ್ಲಿ ಪ್ರಾಧಿಕಾರದ ಆದೇಶವು, ಕಾನೂನಿನಲ್ಲಿ ಅಥವಾ ಆದೇಶವನ್ನು ಹೊರಡಿಸಿದ ಸಂಗತಿಗಳ ಹಿನ್ನೆಲೆಯಲ್ಲಿ ಬದಲಾವಣೆಯಾಗದ ಹೊರತು, ಈ ಹಿಂದೆ ಹೇಳಿದಂತೆ ಬಂಧಕ ವಾಗಿರತಕ್ಕದ್ದು.

(6) ಪ್ರಾಧಿಕಾರಕ್ಕೆ ಯಾವೊಬ್ಬ ಅಧಿಕಾರಿಯು ಸಲ್ಲಿಸಿದ ಮನವಿಯ ಮೇಲೆ ಅಥವಾ ಅನ್ಯಥಾ, ತಾನು ಹೊರಡಿಸಿದ ಆದೇಶವನ್ನು, ಅರ್ಜಿದಾರನು ಮೋಸದಿಂದ ಅಥವಾ ಸಂಗತಿಗಳನ್ನು ತಪ್ಪಾಗಿ ನಿರೂಪಿಸುವ ಮೂಲಕ ಪಡೆದಿದ್ದಾನೆಂದು ಅದಕ್ಕೆ ಕಂಡುಬಂದರೆ, ಅದು ಆದೇಶದ ಮೂಲಕ, ಅಂಥ ಆದೇಶವನ್ನು ಆರಂಭದಿಂದಲೇ, ಶೂನ್ಯವಾದುದೆಂದು ಘೋಷಿಸಬಹುದು ಮತ್ತು ತದನಂತರ ಈ ಅಧಿನಿಯಮದ ಎಲ್ಲ ಉಪಬಂಧಗಳು, ಅಂಥ ಆದೇಶವನ್ನು ಎಂದೂ ಹೊರಡಿಸಿದಿದ್ದರೆ ಹೇಗೋ ಹಾಗೆ ಅರ್ಜಿದಾರನಿಗೆ ಅನ್ವಯಿಸತಕ್ಕದ್ದು.

(7) 64ನೇ ಪ್ರಕರಣದ (2)ನೇ ಉಪ–ಪ್ರಕರಣ ಮತ್ತು 66ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಈ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವು ಅಂತಿಮವಾಗಿರತಕ್ಕದ್ದು."

13. 72ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 72ನೇ ಪ್ರಕರಣದಲ್ಲಿ (2)ನೇ ಉಪ–ಪ್ರಕರಣದಲ್ಲಿ "ಒಂದು ವಿವರಪಟ್ಟಿಯನ್ನು" ಎಂಬ ಪದಗಳ ತರುವಾಯ "ಅಥವಾ ಒಂದು ವಿವರ ಪಟ್ಟಿಯ ತಯಾರಿಕೆಗಾಗಿ ಯಾವುದೇ ವಿವರಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

14. ಮೂರನೇ ಅನುಸೂಚಿಯ ತಿದ್ದುಪಡಿ.– ಮೂಲ ಅಧಿನಿಯಮದ ಮೂರನೇ ಅನುಸೂಚಿಯ ಶೀರ್ಷಿಕೆಯಲ್ಲಿ "ಶೇಕಡ ನಾಲ್ಕರ ದರದಲ್ಲಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

15. ಆರನೇ ಅನುಸೂಚಿಯ ತಿದ್ದುಪಡಿ.– ಮೂಲ ಅಧಿನಿಯಮದ ಆರನೇ ಅನುಸೂಚಿಯಲ್ಲಿ, 3ನೇ ಅಂಕಣದಲ್ಲಿ,–

(i) 1 ರಿಂದ 6, 8 ರಿಂದ 11 ಮತ್ತು 13 ರಿಂದ 22ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ "ಶೇಕಡ ನಾಲ್ಕು" ಎಂಬ ಪದಗಳು ಬರುವ ಕಡೆಗಳಲೆಲ್ಲಾ "ಶೇಕಡ ಐದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) 23ನೇ ಕ್ರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳಲ್ಲಿ "ಶೇಕಡ ಹನ್ನೊರಡುವರೆ" ಎಂಬ ಪದಗಳಿಗೆ "ಶೇಕಡ ಹದಿಮೂರುವರೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಆಯವ್ಯಯದಲ್ಲಿ ಮಾಡಿದ ಪ್ರಸ್ತಾವಗಳನ್ನು ಜಾರಿಗೊಳಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಹಾಗೂ ಮುಖ್ಯವಾಗಿ ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸುವುದಕ್ಕಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ:–

(i) ಲೆಕ್ಕ ನಿರ್ವಹಣೆಯನ್ನು ಹಾಗೂ ತೆರಿಗೆ ಕಾನೂನು ಪಾಲನೆಯನ್ನು ಸರಳೀಕರಿಸುವುದಕ್ಕಾಗಿ ಸರಕುಗಳ ಗರಿಷ್ಠ ಚಿಲ್ಲರೆ ಬೆಲೆಗಳ ಆಧಾರದ ಮೇಲೆ ಯಾವುದೇ ಸರಕುಗಳ ಮೇಲೆ ತೆರಿಗೆ ಸಂದಾಯ ಆಯ್ಕೆ ಯೋಜನೆಗೆ ಅವಕಾಶ ಕಲ್ಪಿಸುವುದು;

(ii) ನೋಂದಾಯಿತರಾಗದೇ ಚಿಲ್ಲರೆ ವ್ಯಾಪಾರಿಗಳು ಮಾಡುವ ಮೌಲ್ಯವರ್ಧನೆಯ ಮೇಲೆ ತೆರಿಗೆ, ಸಂದಾಯವನ್ನು ಖಚಿತಪಡಿಸಿ ಕೊಳ್ಳಲು ತಂಬಾಕು ಉತ್ಪನ್ನಗಳ ಗರಿಷ್ಠ ಚಿಲ್ಲರೆ ಬೆಲೆಯ ಮೇಲೆ ತೆರಿಗೆ ವಿಧಿಸಲು ಉಪಬಂಧ ಕಲ್ಪಿಸುವುದು;

(iii) ತೆರಿಗೆಯ ಕಾನೂನು ಪಾಲನೆಯನ್ನು ಸರಳೀಕರಿಸುವು ದಕ್ಕಾಗಿ ಹಾಗೂ ವಿವಾದಗಳನ್ನು ತಪ್ಪಿಸುವುದಕ್ಕಾಗಿ ಸ್ಪಷ್ಟೀಕರಣ ಹಾಗೂ ಪೂರ್ವಭಾವಿ ನಿರ್ಣಯಗಳ ಪ್ರಾಧಿಕಾರವನ್ನು ರಚಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು;

(iv) ಸರ್ಕಾರಕ್ಕೆ ಬಾಕಿ ಇರುವ ತೆರಿಗೆಯ ಸಂದಾಯವನ್ನು ಯಾವುದೇ ವಿಳಂಬವಿಲ್ಲದೆ ಪಾವತಿಸುವುದನ್ನು ಖಚಿತಪಡಿ ಸಿಕೊಳ್ಳುವುದಕ್ಕಾಗಿ, ವಿದ್ಯುನ್ಮಾನ ವಿಧಾನದ ಮೂಲಕ ವಿವರ ಪಟ್ಟಿಗಳನ್ನು ಸಲ್ಲಿಸುವುದು ಮತ್ತು ತೆರಿಗೆಯನ್ನು ಸಂದಾಯ ಮಾಡುವುದು ಕಡ್ಡಾಯವಾಗುವ ವ್ಯಾಪಾರಿಗಳ ವರ್ಗವನ್ನು ಅಧಿಸೂಚಿಸುವುದಕ್ಕೆ ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರ ನೀಡುವುದು;

(v) ಸರಕು ವಾಹನಗಳನ್ನು ತಡೆಯುವುದಕ್ಕಾಗಿ ಮತ್ತು ಪರೀಕ್ಷಿಸುವುದಕ್ಕಾಗಿ ಅಧಿಕಾರಿಗಳನ್ನು ಪ್ರಾಧಿಕಾರಿಸುವುದಕ್ಕಾಗಿ ಅಧಿಸೂಚಿಸಲು ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರವನ್ನು ನೀಡುವುದು;

(vi) ಚೆಕ್ ಪೋಸ್ಟುಗಳಲ್ಲಿ ಮತ್ತು ಇತರ ಸ್ಥಳಗಳಲ್ಲಿ ಸರಕು ವಾಹನಗಳನ್ನು ಶೀಘ್ರವಾಗಿ ಪರೀಕ್ಷಿಸಲು ಅನುಕೂಲವಾಗುವಂತೆ ಅವುಗಳಲ್ಲಿ ಸಾಗಿಸುತ್ತಿರುವ ಸರಕುಗಳ ವಿವರಗಳನ್ನು ವೆಬ್‌ಸೈಟ್‌ನಲ್ಲಿ ನಮೂದಿಸುವಂತೆ ನಿರ್ದಿಷ್ಟಪಡಿಸಿ ಅಧಿಸೂಚಿಸುವುದಕ್ಕೆ ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರವನ್ನು ನೀಡುವುದು;

(vii) ಸರಕು ವಾಹನಗಳ ಮಾಲೀಕರು ಅಥವಾ ಪ್ರಭಾರದಲ್ಲಿರುವ ವ್ಯಕ್ತಿಗಳು, ಅವುಗಳನ್ನು ಚೆಕ್‌ಪೋಸ್ಟ್ ಅಥವಾ ಸುಂಕದ ಕಟ್ಟೆಗಳಲ್ಲದ ಇತರ ಸ್ಥಳಗಳಿಗೆ ಪರೀಕ್ಷೆಗಾಗಿ ತೆಗೆದುಕೊಂಡು ಹೋಗಬೇಕಾದ ಸ್ಥಳಗಳನ್ನು ಅಧಿಸೂಚಿಸುವುದಕ್ಕೆ ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರವನ್ನು ನೀಡುವುದು;

(viii) ವಿವರ ಪಟ್ಟಿಗಳ ತಯಾರಿಕೆಗಾಗಿ ತಪ್ಪು ವಿವರಗಳನ್ನು ಸಲ್ಲಿಸಿದ್ದಕ್ಕಾಗಿ ದಂಡವನ್ನು ವಿಧಿಸುವುದಕ್ಕೆ ಉಪಬಂಧ ಕಲ್ಪಿಸುವುದು.

ಕೆಲವು ಪ್ರಸ್ತುತ ಉಪಬಂಧಗಳನ್ನು ಸರಳಗೊಳಿಸುವುದಕ್ಕಾಗಿ, ಕೆಲವು ಅನುಷಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಹಾಗೂ ಇತರ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ

ಪ್ರಸ್ತಾವಿತ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನೆಗೆ ಸಂಬಂಧಿಸಿದ ಜ್ಞಾಪನ ಪತ್ರ

ಖಂಡ 2.– 2ನೇ ಖಂಡದ (iii) ನೇ ಉಪ–ಖಂಡದ ಅಡಿಯಲ್ಲಿ ಸೇರಿಸಲು ಉದ್ದೇಶಿಸಿರುವ 4ನೇ ಪ್ರಕರಣದ (5)ನೇ ಉಪ–ಪ್ರಕರಣವು, ತಂಬಾಕು ಉತ್ಪನ್ನಗಳ ಮೇಲೆ ಗರಿಷ್ಠ ಚಿಲ್ಲರೆ ಬೆಲೆ ಆಧಾರದ ಮೇಲೆ ತೆರಿಗೆ ಸಂದಾಯ ಮಾಡುವ ಬಗ್ಗೆ ಐದುನೂರು ರೂಪಾಯಿಗಳಿಗೆ ಮೀರಿದ, ಬೆಲೆಯನ್ನು ಅಧಿಸೂಚಿಸಲು ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರವನ್ನು ನೀಡುತ್ತದೆ.

ಖಂಡ 9.– 9ನೇ ಖಂಡದ ಅಡಿಯಲ್ಲಿ ಸೇರಿಸಲು ಉದ್ದೇಶಿಸಿರುವ 35ನೇ ಪ್ರಕರಣದ (1)ನೇ ಉಪ–ಪ್ರಕರಣವು, ವಿದ್ಯುನ್ಮಾನ ವಿಧಾನದಲ್ಲಿ ವಿವರ ಪಟ್ಟಿಗಳನ್ನು ಸಲ್ಲಿಸುವುದು ಮತ್ತು ವಿದ್ಯುನ್ಮಾನದ ಮೂಲಕ ತೆರಿಗೆ ಸಂದಾಯಿಸುವುದು ಅಗತ್ಯಪಡಿಸಿದ ನೋಂದಾಯಿತ ವ್ಯಾಪಾರಿಗಳ ವರ್ಗವನ್ನು ಅಧಿಸೂಚಿಸಲು ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರವನ್ನು ನೀಡುತ್ತದೆ.

ಖಂಡ 10(i).– 10ನೇ ಖಂಡದ (i) ನೇ ಉಪ–ಖಂಡದ ಅಡಿಯಲ್ಲಿ ತಿದ್ದುಪಡಿ ಮಾಡಲು ಉದ್ದೇಶಿಸಿದ 53ನೇ ಪ್ರಕರಣದ (2)ನೇ ಉಪ–ಪ್ರಕರಣವು ಸರಕು ವಾಹನಗಳನ್ನು ತಡೆಯಲು ತ್ತು ಪರೀಕ್ಷಿಸುವ ಪ್ರಾಧೀಕರಿಸಲಾದ ಅಧಿಕಾರಿಗಳನ್ನು ಅಧಿಸೂ ಚಿಸಲು ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರವನ್ನು ನೀಡುತ್ತದೆ.

ಖಂಡ 10(ii).- 10ನೇ ಖಂಡದ (ii) ನೇ ಉಪ–ಖಂಡದ ಅಡಿಯಲ್ಲಿ ಸೇರಿಸಲು ಉದ್ದೇಶಿಸಿದ 53ನೇ ಪ್ರಕರಣದ (2–ಎ)ನೇ ಉಪ–ಪ್ರಕರಣವು, ರಾಜ್ಯದ ಚೆಕ್‌ಪೋಸ್ಟ್‌ಗಳ ಮೂಲಕ ಹಾದು ಹೋಗುವ ಸರಕು ವಾಹನಗಳಲ್ಲಿ, ಸಾಗಾಣಿಕೆಯಾಗುತ್ತಿರುವ ಸರಕುಗಳನ್ನು ಕಳುಹಿಸುವವನು ಅಥವಾ ಸ್ವೀಕರಿಸುವವನು ತಮಗೆ ಸೇರಿದ ಸರಕುಗಳ ವಿವರಗಳನ್ನು ನಮೂದಿಸುವ ವೆಬ್‌ಸೈಟ್ ಮತ್ತು ಅಂಥ ನಮೂದುಗಳನ್ನು ಮಾಡುವ ವಿಧಾನ ಅವುಗಳನ್ನು ಅಧಿಸೂಚಿಸುವುದಕ್ಕಾಗಿ ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರವನ್ನು ನೀಡುತ್ತದೆ.

ಖಂಡ 10(iii).- 10ನೇ ಖಂಡದ (iii) ನೇ ಉಪ–ಖಂಡದ ಅಡಿಯಲ್ಲಿ ತಿದ್ದುಪಡಿ ಮಾಡಲು ಉದ್ದೇಶಿಸಿದ 53ನೇ ಪ್ರಕರಣದ (3)ನೇ ಉಪ–ಪ್ರಕರಣವು, ಸರಕು ವಾಹನಗಳನ್ನು ಅವುಗಳ ಪರಿಶೀಲನೆಗಾಗಿ ತೆಗೆದುಕೊಂಡು ಹೋಗಲು ಸರಕು ವಾಹನಗಳ ಮಾಲೀಕ ಅಥವಾ ಅದರ ಪ್ರಭಾರದಲ್ಲಿರುವ ವ್ಯಕ್ತಿಗೆ ನಿರ್ದೇಶಿಸಬೇಕಾದ ಚೆಕ್‌ಪೋಸ್ಟ್ ಅಥವಾ ಸುಂಕದಕಟ್ಟೆಗಳಲ್ಲದ ಇತರ ಸ್ಥಳಗಳನ್ನು ಅಧಿಸೂಚಿಸಲು ವಾಣಿಜ್ಯ ಆಯುಕ್ತರಿಗೆ ಅಧಿಕಾರವನ್ನು ನೀಡುತ್ತದೆ.

ಖಂಡ 12.– 12ನೇ ಖಂಡದ ಅಡಿಯಲ್ಲಿ ಸೇರಿಸಲು ಉದ್ದೇಶಿಸಿದ ಹೊಸ 60ನೇ ಪ್ರಕರಣದ (1) ನೇ ಉಪ–ಪ್ರಕರಣವು, ಸ್ಪಷ್ಟೀಕರಣ ಹಾಗೂ ಪೂರ್ವಭಾವಿ ನಿರ್ಣಯಗಳ ಪ್ರಾಧಿಕಾರದ ರಚನೆಯನ್ನು ಅಧಿಸೂಚಿಸಲು ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ಸಾಮಾನ್ಯ ಸ್ವರೂಪದ್ದಾಗಿದೆ.

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು ಮತ್ತು
ಆರ್ಥಿಕ ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

ಅನುಬಂಧ

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ರ (2004ರ ಕರ್ನಾಟಕ ಅಧಿನಿಯಮ 32) ಉದ್ಧೃತ ಭಾಗ

xx xx xx

4. ತೆರಿಗೆ ಬದ್ಧತೆ ಮತ್ತು ಅದರ ದರಗಳು.– (1) 22 ಮತ್ತು 24ನೇ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದಂತೆ ನೋಂದಾಯಿತನಾದ ಅಥವಾ ನೋಂದಾಯಿತನಾಗಲು ಅಗತ್ಯಪಡಿಸಲಾದ ಪ್ರತಿಯೊಬ್ಬ ವ್ಯಾಪಾರಿಯು ತನ್ನ ತೆರಿಗೆಗೆ ಗುರಿಯಾಗತಕ್ಕ ವಹಿವಾಟಿನ ಮೇಲೆ,

(ಎ) ಈ ಮುಂದಿನಂತೆ ಎಂದರೆ,–

(i) ಎರಡನೇ ಅನುಸೂಚಿಯಲ್ಲಿ ನಮೂದಿಸಿದ ಸರಕುಗಳ ಸಂಬಂಧದಲ್ಲಿ ಶೇಕಡಾ ಒಂದರ ದರದಲ್ಲಿ,

(ii) ಮೂರನೇ ಅನುಸೂಚಿಯಲ್ಲಿ ನಮೂದಿಸಿದ ಸರಕುಗಳ ಸಂಬಂಧದಲ್ಲಿ ಶೇಕಡಾ ನಾಲ್ಕರ ದರದಲ್ಲಿ, ಮತ್ತು

(iii) ನಾಲ್ಕನೇ ಅನುಸೂಚಿಯಲ್ಲಿ ನಮೂದಿಸಿದ ಸರಕುಗಳ ಸಂಬಂಧದಲ್ಲಿ ಶೇಕಡಾ ಇಪ್ಪತ್ತರ ದರದಲ್ಲಿ

(ಬಿ) ಇತರ ಸರಕುಗಳ ಸಂಬಂಧದಲ್ಲಿ ಶೇಕಡ ಹನ್ನೆರಡುವರೆಯ ದರದಲ್ಲಿ,

– ತೆರಿಗೆಯನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು.

xx xx xx

(3 ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಯಾವುವೇ ಸರಕುಗಳ ಸಂಬಂಧದಲ್ಲಿ (1)ನೇ ಉಪ ಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯನ್ನು ಕಡಿಮೆ ಮಾಡಬಹುದು.

(4) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಪ್ರತಿಯೊಬ್ಬ ವ್ಯಾಪಾರಿಯು, ಮೂರನೇ ಅನುಸೂಚಿಯ 60ನೇ ಕ್ರಮ ಸಂಖ್ಯೆಯಲ್ಲಿ

ನಿರ್ದಿಷ್ಟಪಡಿಸದ ಸರಕುಗಳ ಮೇಲಿನ ತೆರಿಗೆಯನ್ನು, ಕಂಟೇನರ್‌ನ ಅಥವಾ ಅದರ ಪ್ಯಾಕಿನ ಲೇಬಲ್ ಮೇಲೆ ಸೂಚಿಸಲಾದ ಗರಿಷ್ಠ ಚಿಲ್ಲರೆ ಬೆಲೆಯ ಮೇಲೆ ಅಥವಾ ಸಂದಾಯವಾಗತಕ್ಕ ತೆರಿಗೆಗೆ ಸಮನಾದ ಮೊಬಲಗನ್ನು ಕಡಿತಗೊಳಿಸಿದಂಥ ಗರಿಷ್ಠ ಚಿಲ್ಲರೆ ಬೆಲೆಯ ಮೇಲೆ)[2] ಸಂದಾಯ ಮಾಡಲು ಆಯ್ಕೆ ಮಾಡಿಕೊಂಡರೆ, ಹಾಗೆ ಸಂದಾಯ ಮಾಡಬಹುದು.

xx xx xx

5. ತೆರಿಗೆ ವಿನಾಯಿತಿ.– (1) ಒಂದನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸರಕುಗಳನ್ನು ಅಥವಾ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ಸರಕುಗಳನ್ನು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯಿಂದ ವಿನಾಯಿತಿಗೊಳಿಸತಕ್ಕದ್ದು.

xx xx xx

18. ಕ್ಯಾಂಟೀನುಗಳ ಸಂದರ್ಭದಲ್ಲಿ ಮೂಲದಲ್ಲಿ ತೆರಿಗೆಯನ್ನು ಮುರಿದುಕೊಳ್ಳುವುದು.– (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಒಂದು ಕಾರ್ಖಾನೆ ಅಥವಾ ಇತರ ಕೈಗಾರಿಕಾ ಉದ್ಯಮವು ಅಥವಾ ಯಾವುದೇ ಇತರ ಉದ್ಯಮ ಸಂಸ್ಥೆಯು, ಒಂದು ಕ್ಯಾಂಟೀನನ್ನು ಅಥವಾ ಕೆಫಿಟೇರಿಯವನ್ನು ಅಥವಾ ರೆಸ್ಟೋರೆಂಟನ್ನು ಅಥವಾ ಇತರ ಅದೇ ಬಗೆಯ ಸೌಲಭ್ಯ, ಒಬ್ಬ ವ್ಯಾಪಾರಿಯ ಮೂಲಕ, ಅಂಥ ಕಾರ್ಖಾನೆಗಳ ಅಥವಾ ಕೈಗಾರಿಕಾ ಉದ್ಯಮಗಳ ಅಥವಾ ಉದ್ಯಮ ಸಂಸ್ಥೆಗಳ ನೌಕರರಿಗೆ ಒಂದು ಸೌಕರ್ಯವಾಗಿ, ನಡೆಸುತ್ತಿದ್ದರೆ, ತಮ್ಮ ನೌಕರರಿಗೆ ಆಹಾರ ಮತು ಪಾನೀಯ ವಸ್ತುಗಳ ಮಾರಾಟದ ಸಂಬಂಧದಲ್ಲ, ಯಾವುದೇ ಹೆಸರಿನಿಂದ ಕರೆಯಲಾಗುವ ಅವರ ಕೊಡುಗೆಯಾಗಿ . ಅಂಥ ವ್ಯಾಪಾರಿಗೆ ಅವರು ಸಂದಾಯ ಮಾಡತಕ್ಕ ಯಾವುದೇ ಮೊಬಲಗಿನಿಂದ, ನೌಕರರಿಂದ ಅಂಥ ವ್ಯಾಪಾರಿಯು ಸ್ವೀಖರಿಸಿದ ಅಥವಾ ಸ್ವೀಕರಿಸತಕ್ಕ ಒಟ್ಟು ಮಾರಾಟ ಬೆಲೆಯ ಮತ್ತು ಅಂಥ ವ್ಯಾಪಾರಿಗೆ ಅಂಥ ಕಾರ್ಖಾನೆಗಳು ಅಥವಾ ಕೈಗಾರಿಕಾ ಉದ್ಯಮಗಳು ಅಥವಾ ಉದ್ಯಮ ಸಂಸ್ಥೆಗಳು ಸಂದಾಯ ಮಾಡಿದ ಅಥವಾ

ಸಂದಾಯ ಮಾಡತಕ್ಕ ಕೊಡುಗೆಯ ಶೇಕಡಾ ನಾಲ್ಕರ ದರದಲ್ಲಿ ಮೊಬಲಗನ್ನು ಮುರುಗಡೆಮಾಡತಕ್ಕದ್ದು.

xx xx xx

18ಎ. ಕೆಲವು ಸರಕುಗಳ ಸಂಬಂಧದಲ್ಲಿ ಮೂಲದಲ್ಲಿಯೇ ತೆರಿಗೆಯನ್ನು ಮುರಿದುಕೊಳ್ಳುವುದು.– (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಉತ್ಪಾದನೆ ಅಥವಾ ಸಂಸ್ಕರಣೆಯಲ್ಲಿ ಬಳಸುವುದಕ್ಕಾಗಿ ಅಥವಾ ಆಯುಕ್ತರು ಅಧಿಸೂಚಿಸಬಹುದಾದಂತೆ ಯಾವುದೇ ಇತರ ಉದ್ದೇಶಕ್ಕಾಗಿ ಬಳಸುವು ದಕ್ಕಾಗಿ ಎಣ್ಣೆಬೀಜಗಳು ಅಥವಾ ಕಚ್ಚಾ ಎಣ್ಣೆ ಅಥವಾ ಹಿಂಡಿ ಅಥವಾ ಕಬ್ಬಿಣದ ಮತ್ತು ಉಕ್ಕಿನ ಸ್ಕ್ರಾಪ್‌ಗಳು ಅಥವಾ ಆಯುಕ್ತರು ಅಧಿಸೂಚಿಸ' ಬಹುದಾದ ಯಾವುದೇ ಇತರ ಸರಕುಗಳನ್ನು ಖರೀದಿಸುವ ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು, ಅಂಥ ಸರಕುಗಳನ್ನು ತನಗೆ ಮಾರಾಟ ಮಾಡಿದ ನೋಂದಾಯಿತ ವ್ಯಾಪಾರಿಗೆ ತಾನು ಸಂದಾಯ ಮಾಡತಕ್ಕ ಮೊಬಲಗಿನಿಂದ, 4ನೇ ಪ್ರಕರಣದ ಅಡಿಯಲ್ಲಿ ಆ ಸರಕುಗಳ ಮಾರಾಟದ ಮೇಲೆ ಸಂದಾಯ ಮಾಡತಕ್ಕ ತೆರಿಗೆಗೆ ಸಮನಾದ ಮೊಬಲಗನ್ನು ಮುರಿದುಕೊಳ್ಳತಕ್ಕದ್ದು.

xx xx xx

(4) (1)ನೇ ಉಪ ಪ್ರಕರಣದ ಅಡಿಯಲ್ಲಿ ತೆರಿಗೆ ಮುರಿದುಕೊಳ್ಳು ತ್ತಿರುವ ವ್ಯಾಪಾರಿಯು ತಾನು ಹಿಂದಿನ ತಿಂಗಳಲ್ಲಿ ಮುರುಗಡೆ ಮಾಡಿದ ತೆರಿಗೆಯ ವಿವರಗಳನ್ನು ಒಳಗೊಂಡ ನಿಯಮಿಸಲಾದ ನಮೂನೆಯಲ್ಲಿರುವ ಒಂದು ವಿವರಪಟ್ಟಿಯನ್ನು ನಿಯಮಿಸಲಾದ ಪ್ರಾಧಿಕಾರಕ್ಕೆ ಪ್ರತಿ ತಿಂಗಳೂ ಕಳುಹಿಸತಕ್ಕದ್ದು ಮತ್ತು ಹಾಗೆ ತಾನು ಮುರಿದುಕೊಂಡ ತೆರಿಗೆಯ ಮೊಬಲಗನ್ನು ಯಾವ ತಿಂಗಳಲ್ಲಿ ಅಂಥ ಮುರುಗಡೆಯನ್ನು ಮಾಡಲಾ ಗಿದೆಯೋ ಆ ಹಿಂದಿನ ತಿಂಗಳು ಮುಕ್ತಾಯವಾದ ತರುವಾಯ ಇಪ್ಪತ್ತು ದಿನಗಳ ಒಳಗೆ ಹಿಂದಿನ ತಿಂಗಳಿಗಾಗಿ ತಾನು ಸಂದಾಯ ಮಾಡಬೇಕಾಗಿದ್ದ ಯಾವುದೇ ನಿವ್ವಳ ತೆರಿಗೆಗೆ ಸಂಬಂಧಿಸಿದಂತೆ ತಾನು ಹಾಗೆ ಮುರಿದುಕೊಂಡ ತೆರಿಗೆಯ ಮೊಬಲಗನ್ನು ಸರಿಹೊಂದಿಸಿದ ತರುವಾಯ ಸಂದಾಯ ಮಾಡತಕ್ಕದ್ದು ಮತ್ತು ಹಾಗೆ ಸಂದಾಯ ಮಾಡತಕ್ಕ ಮೊಬಲಗನ್ನು 42ನೇ

ಪ್ರಕರಣದ ಉದ್ದೇಶಗಳಿಗಾಗಿ ಈ ಅಧಿನಿಯಮದ ಅಡಿಯಲ್ಲಿ ಬಾಕಿ ಇರುವ ಮೊಬಲಗು ಎಂದು ಭಾವಿಸತಕ್ಕದ್ದು.

(5) ಈ ಉಪಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪಿದರೆ ನಿಯಮಿಸಲಾದ ಪ್ರಾಧಿಕಾರಿಯು ತಾನು ಸೂಕ್ತವೆಂದು ಭಾವಿಸಿದಂಥ ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ಸಂಬಂಧಪಟ್ಟ ವ್ಯಾಪಾರಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ತನ್ನ ಅತ್ಯುತ್ತಮ ವಿವೇಚನೆಗನುಸಾರ ಅಂಥ ವ್ಯಾಪಾರಿಯು ಈ ಉಪಪ್ರಕರಣದ ಅಡಿಯಲ್ಲಿ ಸಂದಾಯ ಮಾಡತಕ್ಕ ಮೊಬಲಗನ್ನು ನಿರ್ಧರಿಸಬಹುದು ಮತ್ತು ಹಾಗೆ ನಿರ್ಧರಿಸಿದ ಮೊಬಲಗನ್ನು 42ನೇ ಪ್ರಕರಣದ ಉದ್ದೇಶಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ಬಾಕಿಯಿರುವ ಮೊಬಲಗೆಂದು ಭಾವಿಸತಕ್ಕದ್ದು.

xx xx xx

22. ನೋಂದಣಿಯ ಬದ್ಧತೆ.– (1) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 25) ಉಪ ಬಂಧಗಳ ಅಡಿಯಲ್ಲಿ ಲೆಕ್ಕಹಾಕಿದಾಗ 2005ರ ಮಾರ್ಚ್ ಮೂವತ್ತೊಂದನೇ ದಿನದಂದು ಕೊನೆಗೊಳ್ಳುವ ವರ್ಷದಲ್ಲಿ ಒಟ್ಟು ವಹಿವಾಟು ಎರಡು ಲಕ್ಷ ರೂಪಾಯಿಗಳನ್ನು ಮೀರುವ ಅಥವಾ ತನ್ನ ಒಟ್ಟು ವಹಿವಾಟು ಎರಡು ಲಕ್ಷ ರೂಪಾಯಿಗಳನ್ನು ಮೀರುತ್ತದೆಯೆಂದು ಸಕಾರಣವಾಗಿ ನಿರೀಕ್ಷಿಸುವ, ಪ್ರತಿಯೊಬ್ಬ ವ್ಯಾಪಾರಿಯು ನೋಂದಾಯಿತನಾಗಲು ಬದ್ಧನಾಗಿರತಕ್ಕದ್ದು ಮತ್ತು ಸರ್ಕಾರವು ಅಧಿಸೂಚಿಸಬಹುದಾದ ಅಂಥ ದಿನಾಂಕದಂದು ಅಂಥ ಬದ್ಧತೆಯನ್ನು ವರದಿ ಮಾಡತಕ್ಕದ್ದು.

(2) 2005ರ ಮಾರ್ಚ್ ಮೂವತ್ತೊಂದನೇ ದಿನದಂದು ಕೊನೆಗೊಳ್ಳುವ ವರ್ಷದ ನಂತರ ಯಾವುದೇ ವರ್ಷದಲ್ಲಿ, ಯಾವುದೇ ಸಮಯದಲ್ಲಿ, ತೆರಿಗೆಗೆ ಗುರಿಯಾಗತಕ್ಕ ತನ್ನ ವಹಿವಾಟು ಎರಡು ಲಕ್ಷ ರೂಪಾಯಿಗಳನ್ನು ಮೀರಬಹುದು ಎಂದು ಸಕಾರಣವಾಗಿ ನಂಬಿರುವ ಪ್ರತಿಯೊಬ್ಬ ವ್ಯಾಪಾರಿಯು ನೋಂದಾಯಿತನಾಗಲು ಬದ್ಧನಾಗಿರತಕ್ಕದ್ದು ಮತ್ತು ಅಂಥ ಬದ್ಧತೆಯನ್ನು ತಕ್ಷಣ ಅಥವಾ ಸರ್ಕಾರವು ಅಧಿಸೂಚಿಸ ಬಹುದಾದ ಅಂಥ ದಿನಾಂಕದಂದು ವರದಿ ಮಾಡತಕ್ಕದ್ದು.

(3) 3ನೇ ಪ್ರಕರಣದ ಅನುಸಾರವಾಗಿ ತೆರಿಗೆಯನ್ನು ವಿಧಿಸತಕ್ಕ ದಿನಾಂಕದ ತರುವಾಯದ ಯಾವುದೇ ಒಂದು ತಿಂಗಳಿನಲ್ಲಿ ತೆರಿಗೆಗೆ ಗುರಿಯಾಗತಕ್ಕ ವಹಿವಾಟು ಹದಿನೈದು ಸಾವಿರ ರೂಪಾಯಿಗಳನ್ನು ಮೀರುವ ಪ್ರತಿಯೊಬ್ಬ ವ್ಯಪಾರಿಯು ತಕ್ಷಣ ನೋಂದಾಯಿತನಾಗತಕ್ಕದ್ದು.

xx xx xx

27. ನೋಂದಣಿಯ ರದ್ದಿಯಾತಿ.– (1) ಈ ಮುಂದಿನ ಯಾವುದೇ ಸಂದರ್ಭದಲ್ಲಿ ಎಂದರೆ,–

(ಎ) ಒಬ್ಬ ನೋಂದಾಯಿತ ವ್ಯಾಪಾರಿಯು ಯಾವುದೇ ವ್ಯಾಪಾರವನ್ನು ಮುಂದುವರೆಸದಿದ್ದಲ್ಲಿ, ಪೂರ್ಣವಾಗಿ ವರ್ಗಾಯಿಸಿದ್ದಲ್ಲಿ ಅಥವಾ ಅನ್ಯಥಾ ವಿಲೆ ಮಾಡಿದ್ದಲ್ಲಿ; ಅಥವಾ

(ಬಿ) ವ್ಯಾಪಾರದ ಮಾಲೀಕತ್ವದ ಸ್ಥಾನಮಾನದಲ್ಲಿ ಯಾವುದೇ ಬದಲಾವಣೆಯಾಗಿದ್ದಲ್ಲಿ; ಅಥವಾ

(ಸಿ) ನೋಂದಾಯಿತ ವ್ಯಾಪಾರಿಯ ಸರಕುಗಳ ಮಾರಾಟದ ತೆರಿಗೆಗೆ ಗುರಿಯಾಗತಕ್ಕ ವಹಿವಾಟು ಹನ್ನೆರಡು ನಿರಂತರ ತಿಂಗಳುಗಳ ಯಾವುದೇ ಅವಧಿಯಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಮೀರದಿದ್ದಲ್ಲಿ; ಅಥವಾ

(ಡಿ) ಒಬ್ಬ ವ್ಯಾಪಾರಿಯು ಯಾವುದೇ ತೆರಿಗೆಗೆ ಗುರಿಯಾಗತಕ್ಕ ಮಾರಾಟವನ್ನು ಮಾಡದೆ ತೆರಿಗೆಯ ಬೆಲೆ ಪಟ್ಟಿಗಳನ್ನು ನೀಡಿದಲ್ಲಿ, ಅಥವಾ

(ಇ) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಒಬ್ಬ ವ್ಯಾಪಾರಿಯು ಮೃತನಾದಲ್ಲಿ,

– ಮತ್ತು ಯಾವುದೇ ಉಚಿತ ಮತ್ತು ಸಾಕಷ್ಟು ಕಾರಣಗಳಿದ್ದರೆ, ನಿಯಮಿಸಲಾದ ಪ್ರಾಧಿಕಾರವು, ತಾನಾಗಿಯೇ ಆಗಲಿ ಅಥವಾ ವ್ಯಾಪಾರಿಯು ನೀಡಿದ ಅರ್ಜಿಯ ಮೇಲಾಗಲಿ ಅಥವಾ ಮರಣದ ಸಂದರ್ಭದಲ್ಲಿ, ನಿಯಮಿಸಲಾದ ವಿಧಾನದಲ್ಲಿ ಕಾನೂನುಬದ್ಧ ವಾರಸುದಾರರ ಅರ್ಜಿಯ ಮೇಲಾಗಲಿ, ಸಂದರ್ಭದ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಯಾವುದೇ ಪೂರ್ವ ದಿನಾಂಕವನ್ನು ಒಳಗೊಂಡಂತೆ ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ದಿನಾಂಕದಿಂದ ನೋಂದಣಿ ಪ್ರಮಾಣ ಪತ್ರವನ್ನು ರದ್ದುಗೊಳಿಸಬಹುದು.

xx xx xx

31. ಲೆಕ್ಕ ಪತ್ರಗಳು.– (1) ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು ಮತ್ತು ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಸದಾಯ ಮಾಡಲು ಬದ್ಧನಾದ ಪ್ರತಿಯೊಬ್ಬ ವ್ಯಾಪಾರಿಯು, ಸಂದಾಯ ಮಾಡಿದ ಹೂಡುವಳಿ ತೆರಿಗೆ ಮತ್ತು ಸಂದಾಯ ಮಾಡಬೇಕಾದ ಹುಟ್ಟುವಳಿ ತೆರಿಗೆಯೂ ಸೇರಿದಂತೆ ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯ ಪ್ರತಿಯೊಂದು ದರಕ್ಕೆ ಒಳಪಟ್ಟ ಸರಕುಗಳ ಮೌಲ್ಯಗಳನ್ನು ತೋರಿಸುವ ತನ್ನ ಎಲ್ಲಾ ಖರೀದಿಗಳ, ಸ್ವೀಕೃತಿಗಳ, ಮಾರಾಟಗಳ, ಇತರ ವಿಲೆಗಳ, ಉತ್ಪಾದನೆಯ, ತಯಾರಿಕೆಯ ಮತ್ತು ದಾಸ್ತಾನಿನ ನಿಜವಾದ ಮತ್ತು ಸರಿಯಾದ ಲೆಕ್ಕ ಪತ್ರಗಳನ್ನು ಕನ್ನಡ ಅಥವಾ ಇಂಗ್ಲೀಷ್ ಅಥವಾ ಹಿಂದಿ ಅಥವಾ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಅಂಥ ಇತರ ಭಾಷೆಯಲ್ಲಿ ಇಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

xx xx xx

(4) ಯಾರ ಒಟ್ಟು ವಹಿವಾಟು ಒಂದು ವರ್ಷದಲ್ಲಿ ನಲವತ್ತು ಲಕ್ಷ ರೂಪಾಯಿಗಳನ್ನು ಮೀರುವುದೋ, ಆ ಪ್ರತಿಯೊಬ್ಬ ವ್ಯಾಪಾರಿಯು, ತನ್ನ ಲೆಕ್ಕಪತ್ರಗಳನ್ನು ನಿಯಮಿಸಬಹುದಾದಂಥ ಷರತ್ತುಗಳಿಗೆ ಮತ್ತು ಅಂಥ ಮಿತಿಗಳಿಗೆ ಒಳಪಟ್ಟು ಒಬ್ಬ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಕಾಸ್ಟ್ ಅಕೌಂಟೆಂಟ್ ಅಥವಾ ಒಬ್ಬ ತೆರಿಗೆ ವೃತ್ತಿದಾರನಿಂದ ಪರಿಶೋಧಿಸತಕ್ಕದ್ದು ಮತ್ತು ಪರಿಶೋಧಿತ ಲೆಕ್ಕಪತ್ರಗಳ ವಿವರಣ ಪಟ್ಟಿಯ ಒಂದು ಪ್ರತಿಯನ್ನು ಮತ್ತು ನಿಯಮಿಸಲಾದ ದಸ್ತಾವೇಜುಗಳನ್ನು, ನಿಯಮಿಸಲಾದ ರೀತಿಯಲ್ಲಿ ನಿಯಮಿಸಲಾದ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

xx xx xx

35. ವಿವರ ಪಟ್ಟಿಗಳು.– (1) (2) ರಿಂದ (4)ನೇ ಉಪಪ್ರಕರಣಗಳಿಗೆ ಒಳಪಟ್ಟು ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು ಮತ್ತು 9ನೇ ಪ್ರಕರಣದ (2)ನೇ ಉಪ–ಪ್ರಕರಣದ ಅಡಿಯಲ್ಲಿ ಸಂಗ್ರಹಿಸಲಾದ ತೆರಿಗೆ ಸಂದಾಯಕ್ಕೆ ಬದ್ಧವಾದ ಕೇಂದ್ರ ಸರ್ಕಾರ, ಒಂದು ರಾಜ್ಯ ಸರ್ಕಾರ, ಶಾಸನಬದ್ಧ ನಿಕಾಯ ಮತ್ತು ಒಂದು ಸ್ಥಳೀಯ ಪ್ರಾಧಿಕಾರವು ಎಲೆಕ್ಟ್ರಾನಿಕ್

ವಿಧಾನಗಳು ಸೇರಿದಂತೆ ಅಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಒಂದು ವಿವರ ಪಟ್ಟಿಯನ್ನು ಒದಗಿಸತಕ್ಕದ್ದು ಮತ್ತು ನಿಯಮಿಸಬಹುದಾದಂತೆ ಹಿಂದಿನ ತಿಂಗಳ ಕೊನೆಯ ತರುವಾಯದ ಇಪ್ಪತ್ತು ದಿನಗಳೊಳಗೆ ಅಥವಾ ಹದಿನೈದು ದಿನಗಳೊಳಗೆ ಅಥವ ಇತರೆ ಯಾವುದೇ ತೆರಿಗೆ ಅವಧಿಯೊಳಗೆ ಅಂಥ ವಿವರ ಪಟ್ಟಿಯ ಮೇಲೆ ಬಾಕಿ ಇರುವ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು.

xx xx xx

53. ಚೆಕ್ ಪೋಸ್ಟ್‌ಗಳ ಸ್ಥಾಪನೆ ಮತ್ತು ಸಾಗಣೆಯಲ್ಲಿರುವ ಸರಕುಗಳ ಪರಿಶೀಲನೆ.– (1) ರಾಜ್ಯದಲ್ಲಿನ ಯಾವುದೇ ಸ್ಥಳ ಅಥವಾ ಸ್ಥಳಗಳಲ್ಲಿ, ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ತಪ್ಪಿಸುವುದನ್ನು ತಡೆಹಿಡಿಯುವ ಅಥವಾ ಪ್ರತಿಬಂಧಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರ ಅಥವಾ ಆಯುಕ್ತನು ಅವಶ್ಯಕವೆಂದು ಪರಿಗಣಿಸಿದಲ್ಲಿ ಅದು ಅಥವಾ ಅವನು, ಅಧಿಸೂಚಿಸಬಹುದಾದಂತೆ ಅಂಥ ಸ್ಥಳ ಅಥವಾ ಸ್ಥಳಗಳಲ್ಲಿ ಚೆಕ್‌ಪೋಸ್ಟ್‌ನ್ನು ಅಥವಾ ಸುಂಕದ ಕಟ್ಟೆಯನ್ನು ಅಥವಾ ಅವೆರಡನ್ನು ಸ್ಥಾಪಿಸುವಂತೆ ಅಧಿಸೂಚನೆಯ ಮೂಲಕ, ನಿರ್ದೇಶಿಸಬಹುದು.

(2) ಒಂದು ಸರಕು ವಾಹನ ಅಥವಾ ನಾವೆ, ಹಡಗು ಅಥವಾ ಅಂಥದೇ ನೌಕೆಯ ಮಲೀಕ ಅಥವಾ ಪ್ರಭಾರ ಹೊಂದಿದ ವ್ಯಕ್ತಿಯು,–

(ಎ) ತನ್ನ ಜೊತೆಯಲ್ಲಿ ಸಂದರ್ಭಾನುಸಾರ ಸರಕು ವಾಹನದ ದಾಖಲೆ, ಟ್ರಿಪ್‌ಶೀಟ್ ಅಥವಾ ಲಾಗ್ ಪುಸ್ತಕವನ್ನು ಒಯ್ಯತಕ್ಕದ್ದು; ಮತ್ತು

(ಬಿ) ಸರಕುಗಳ ವಾಹನ ಅಥವಾ ನಾವೆ, ಹಡಗು ಅಥವಾ ಅಂಥದೇ ನೌಕೆಯಲ್ಲಿ ಸಾಗಿಸುತ್ತಿರುವ ಸರಕುಗಳಿಗೆ ಸಂಬಂಧ ಪಟ್ಟಂತೆ, ನಿಯಮಿಸಬಹುದಾದಂಥ ಅಥವಾ ಆಯುಕ್ತರು ಅಧಿಸೂಚಿಸಬಹುದಾದಂತೆ ದಸ್ತಾವೇಜುಗಳನ್ನು ತನ್ನ ಜೊತೆಯಲ್ಲಿ ತೆಗೆದುಕೊಂಡು ಒಯ್ಯತಕ್ಕದ್ದು; ಮತ್ತು

(ಸಿ) ತಾನು ಹೋಗಬೇಕಾದ ಸ್ಥಳಕ್ಕೆ ಸರಕಿನ ಸಾಗಣೆಯ ರಾಜ್ಯದಲ್ಲಿನ ಯಾವ ಸ್ಥಳದಿಂದ ಪ್ರಾರಂಭವಾಗುತ್ತದೋ ಆ ಸ್ಥಳದಿಂದ ಸಾಧಾರಣವಾಗಿ ಸಾಗುವ ಮಾರ್ಗದಲ್ಲಿ

ಇರುವಂಥ ಮೊದಲ ಚೆಕ್‌ಪೋಸ್ಟ್‌ನಲ್ಲಿ ಅಥವಾ ಸುಂಕದ ಕಟ್ಟೆಯಲ್ಲಿ ಸದರಿ ಚೆಕ್‌ಪೋಸ್ಟಿನ ಅಥವಾ ಸುಂಕದ ಕಟ್ಟೆಯ ಪ್ರಭಾರದಲ್ಲಿರುವ ಯಾವೊಬ್ಬ ಅಧಿಕಾರಿಯ ಅಥವಾ ಇದಕ್ಕಾಗಿಯೇ ರಾಜ್ಯ ಸರ್ಕಾರದಿಂದ ಪ್ರಾಧಿಕೃತನಾಗ ಬಹುದಾದ ಯಾವೊಬ್ಬ ಇತರ ಅಧಿಕಾರಿಯ ಎದುರಿಗೆ ವರದಿ ಮಾಡಿಕೊಳ್ಳತಕ್ಕದ್ದು ಮತ್ತು (ಎ) ಮತ್ತು (ಬಿ) ಖಂಡಗಳಲ್ಲಿ ಉಲ್ಲೇಖಿಸಲಾದ ದಸ್ತಾವೇಜುಗಳನ್ನು ಹಾಜರು ಪಡಿಸತಕ್ಕದ್ದು ಮತ್ತು ಅದರ ಮೇಲೆ ಅಂಥ ಅಧಿಕಾರಿಯ ಮೊಹರನ್ನು ಪಡೆಯತಕ್ಕದ್ದು ಮತ್ತು ರವಾನೆ ಚೀಟಿಗೆ ಸಂಬಂಧಪಟ್ಟಂತೆ ಮೂಲಪ್ರತಿಯೆಂದು ಗುರುತಿಸಲಾದ ಒಂದು ಪ್ರತಿಯನ್ನು ಅಂಥ ಅಧಿಕಾರಿಗೆ ನೀಡತಕ್ಕದ್ದು ಮತ್ತು ಇನ್ನೊಂದು ಪ್ರತಿಯನ್ನು ಸರಕುಗಳ ಸಾಗಣೆಯು ಕೊನೆಗೊಳ್ಳುವವರೆಗೆ ತನ್ನಲ್ಲಿ ಉಳಿಸಿಕೊಳ್ಳತಕ್ಕದ್ದು; ಮತ್ತು

(12) (ಎ) ಚೆಕ್‌ಪೋಸ್ಟ್‌ನ ಅಥವಾ ಸುಂಕದ ಕಟ್ಟೆಯ ಪ್ರಭಾರದಲ್ಲಿರುವ ಅಧಿಕಾರಿ ಅಥವಾ ಯಾವೊಬ್ಬ ಇತರ ಅಧಿಕಾರಿಯು (2)ನೇ ಉಪ-ಪ್ರಕರಣದ ಉಪಬಂಧಗಳ ಯಾವುದೇ ಉಲ್ಲಂಘನೆಗೆ ಅಥವಾ ಪಾಲಿಸದಿರುವುದಕ್ಕೆ ಸಂಬಂಧಪಟ್ಟಂತೆ, ಸಾಕಷ್ಟು ಕಾರಣಗಳನ್ನು ಒದಗಿಸದಿದ್ದಾಗ ಈ ಮುಂದಿನಂತೆ ದಂಡವನ್ನು ವಿಧಿಸಬಹುದು, ಅದು,-

(i) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಒಬ್ಬ ವ್ಯಾಪಾರಿಯು ತಾನು ಸರಕುಗಳನ್ನು ಕಳುಹಿಸುವವನು ಅಥವಾ ಸರಕುಗಳನ್ನು ಪಡೆಯುವವನು ಎಂಬುದಾಗಿ ಅವನು ಒಪ್ಪಿದಲ್ಲಿ, (2)ನೇ ಉಪ-ಪ್ರಕರಣದ (ಸಿ) ಖಂಡದ ಅಥವಾ (ಡಿ) ಖಂಡದ ಉಲ್ಲಂಘನೆಯಲ್ಲಿ ಸಾಗಣೆಯಲ್ಲಿರುವ ಸರಕುಗಳಿಗೆ ಸಂಬಂಧಪಟ್ಟಂತೆ ವಿಧಿಸಬಹುದಾದ ದಂಡವು ಅವುಗಳಿಗೆ ವಿಧಿಸಬಹುದಾದ ತೆರಿಗೆ ಮೊಬಲಗಿಗಿಂತ ಕಡಿಮೆ ಇರತಕ್ಕದ್ದಲ್ಲ ಆದರೆ, ಅಂಥ ತೆರಿಗೆಯ ಮೊಬಲಗಿನ ಒಂದೂವರೆ ಪಟ್ಟನ್ನು ಮೀರತಕ್ಕದ್ದಲ್ಲ;

(ii) (1)ನೇ ಬಾಬ್ತಿನ ಅಡಿಯಲ್ಲಿ ಬರುವವುಗಳ ಹೊರತಾದ ಸಂದರ್ಭಗಳಲ್ಲಿ, ಇತರ ಸಂದರ್ಭಗಳಲ್ಲಿ, ವಿಧಿಸಬಹುದಾದ ದಂಡವು, ಸಾಗಣೆಯಲ್ಲಿರುವ ಸರಕುಗಳ ಸಂಬಂಧದಲ್ಲಿ ವಿಧಿಸಬಹುದಾದ ತೆರಿಗೆಯ ಮೊಬಲಗಿನ ಎರಡರಷ್ಟಕ್ಕೆ ಕಡಿಮೆ ಇರತಕ್ಕದ್ದಲ್ಲ, ಆದರೆ, ತೆರಿಗೆಯ ಮೊಬಲಗಿನ ಮೂರುಪಟ್ಟನ್ನು ಮೀರತಕ್ಕದ್ದಲ್ಲ.

(ಬಿ) ವಿಧಿಸಬಹುದಾದ ದಂಡದ ಮೊಬಲಗು, ಸರಕುಗಳ ಮೌಲ್ಯಕ್ಕಿಂತ ಹೆಚ್ಚಿನದ್ದಾಗಿದ್ದರೆ, ವಿಧಿಸಬಹುದಾದ ದಂಡದ ಮೊಬಲಗನ್ನು ಅಂಥ ಮೌಲ್ಯಕ್ಕೆ ಸೀಮಿತಗೊಳಿಸತಕ್ಕದ್ದು.

(ಸಿ) ಮೇಲಿನ (10)ನೇ ಉಪ–ಪ್ರಕರಣದ ಅಡಿಯಲ್ಲಿನ ವ್ಯವಹರಣೆಗಳಲ್ಲಿ, ವಿಧಿಸಲಾದ ದಂಡವನ್ನು ಸಂದಾಯ ಮಾಡದಿದ್ದಲ್ಲಿ, ಸಾಗಾಣಿಕೆದಾರ ಅಥವಾ ಸರಕು ರಕ್ಷಕ ಅಥವಾ ಸರಕು ವಾಹನಗಳ ಪ್ರಭಾರದಲ್ಲಿರುವ ವ್ಯಕ್ತಿಯು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಸಂದಾಯ ಮಾಡಲು ಬದ್ಧನಾಗತಕ್ಕದ್ದು.

(ಡಿ) ಈ ಉಪ–ಪ್ರಕರಣದ ಅಡಿಯಲ್ಲಿನ ಯಾವುದೇ ದಂಡವನ್ನು ವಿಧಿಸುವುದಕ್ಕೆ ಮೊದಲು, ಅಧಿಕಾರಿಯು, ಸರಕುಗಳ ವಾಹನ ಅಥವಾ ನಾವೆ, ಹಡಗು ಅಥವಾ ಅಂಥದೇ ನೌಕೆಯ ಪ್ರಭಾರದಲ್ಲಿರುವ ವ್ಯಕ್ತಿಗೆ, ಸಾಗಾಣಿಕೆದಾರನಿಗೆ, ಸರಕು ರಕ್ಷಕನಿಗೆ ಅಥವಾ ಸಂದರ್ಭಾನುಸಾರ, ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತವಾದ ವ್ಯಾಪಾರಿಗೆ, ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡತಕ್ಕದ್ದು.

xx xx xx

54. ರಾಜ್ಯದ ಮೂಲಕ ರಸ್ತೆ ಮಾರ್ಗವಾಗಿ ಸರಕುಗಳ ಸಾಗಣೆ ಮತ್ತು ಸಾಗಣೆ ಪಾಸ್ ನೀಡುವುದು.– (1) ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಗುರಿಯಾಗುವ ಸರಕುಗಳನ್ನು ಕೊಂಡೊಯುತ್ತಿರುವ ಒಂದು ವಾಹನವು,

(ಎ) ರಾಜ್ಯದ ಹೊರಗಿನ ಯಾವುದೇ ಸ್ಥಳದಿಂದ ಮತ್ತು ರಾಜ್ಯದ ಹೊರಗಿನ ಯಾವುದೇ ಸ್ಥಳಕ್ಕಾಗಿ ರಾಜ್ಯದ ಮೂಲಕ ಹಾದು ಹೋದರೆ; ಅಥವಾ

(ಬಿ) ದೇಶದ ಹೊರಗಿನ ಯಾವುದೇ ಸ್ಥಳದಿಂದ ರಾಜ್ಯಕ್ಕೆ ಆಮದು ಮಾಡಿಕೊಂಡರೆ ಮತ್ತು ಅಂಥ ಸರಕುಗಳನ್ನು ರಾಜ್ಯದ ಹೊರಗಿನ ಯಾವುದೇ ಸ್ಥಳಕ್ಕೆ ಕೊಂಡೊಯ್ದರೆ;

– ಅಂಥ ವಾಹನದ ಚಾಲಕ ಅಥವಾ ಅದರ ಪ್ರಭಾರದಲ್ಲಿರುವ ಯಾವೊಬ್ಬ ಇತರ ವ್ಯಕ್ತಿಯು ಅವಶ್ಯಕವಿರುವ ಮಾಹಿತಿಯನ್ನು ಒದಗಿಸತಕ್ಕದ್ದು ಮತ್ತು ನಿಯಮಿಸಬಹುದಾದ ಅಂಥ ವಿವರಗಳನ್ನು ಒಳಗೊಂಡ ಒಂದು ಸಾಗಣೆ ಪಾಸನ್ನು ದ್ವಿಪ್ರತಿಯಲ್ಲಿ, ಅವನು ರಾಜ್ಯದೊಳಗೆ ಪ್ರವೇಶಿಸಿದ ತರುವಾಯ ಅಥವಾ ಸಂದರ್ಭಾನುಸಾರ ರಾಜ್ಯದಿಂದ ಸಾಗಣೆಯು ಪ್ರಾರಂಭಗೊಂಡ ತರುವಾಯ ಮೊದಲನೇ ಚೆಕ್‌ಪೋಸ್ಟ್ ಅಥವಾ ಸುಂಕದ ಕಟ್ಟೆಯ ಅಥವಾ ಸರಕು ವಾಹನವು ರಾಜ್ಯದೊಳಕ್ಕೆ ಪ್ರವೇಶಿಸಿದ ತರುವಾಯ ತಡೆದು ನಿಲ್ಲಿಸಿದ ಮೇಲೆ ಅಥವಾ ಸಂದರ್ಭಾನುಸಾರ ಸಾಗಣೆ ಪ್ರಾರಂಭಗೊಂಡ ತರುವಾಯ, 52ನೇ ಪ್ರಕರಣದ (3)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ಪ್ರಾಧಿಕೃತನಾದ ಅಧಿಕಾರಿಯಿಂದ ಪಡೆದುಕೊಳ್ಳತಕ್ಕದ್ದು.

xx xx xx

72. ವಿವರ ಪಟ್ಟಿಗಳಿಗೆ ಮತ್ತು ತೆರಿಗೆ ನಿರ್ಧರಣಕ್ಕೆ ಸಂಬಂಧಿಸಿದ ದಂಡಗಳು.– (1) XX

(2) ಒಬ್ಬ ವ್ಯಾಪಾರಿಯು, ಯಾವುದೇ ನಿಯಮಿಸಲಾದ ತೆರಿಗೆ ಅವಧಿಗಾಗಿ ಒಂದು ವಿವರ ಪಟ್ಟಿಯನ್ನು ಸಲ್ಲಿಸಿದ್ದು, ಅದು ಅವನ ತೆರಿಗೆ ಬದ್ಧತೆಯನ್ನು ಕಡಿಮೆ ತೋರಿಸಿದರೆ ಅಥವಾ ಅವನ ವಾಸ್ತವಿಕ ತೆರಿಗೆ ಬದ್ಧತೆಯ ಅಥವಾ ಸಂದರ್ಭಾನುಸಾರ ಅವನ ವಾಸ್ತವಿಕ ತೆರಿಗೆ ಜಮೆಯ ಶೇಕಡ ಐದಕ್ಕಿಂತ ಹೆಚ್ಚು ತೆರಿಗೆ ಜಮೆಗೆ ಅವನ ಹಕ್ಕುದಾರಿಕೆಯನ್ನು ಹೆಚ್ಚಿಗೆ ತೋರಿಸಿದರೆ, ಅವನಿಗೆ ದಂಡ ವಿಧಿಸುವಿಕೆಯ ವಿರುದ್ಧ ಲಿಖಿತದಲ್ಲಿ ಕಾರಣ ತೋರಿಸಲು ಅವಕಾಶ ನೀಡಲಾದ ತರುವಾಯ, ಕಡಿಮೆ ಅಥವಾ ಹೆಚ್ಚಿಗೆ ತೋರಿಸಿದ ಅಂಥ ತೆರಿಗೆ ಮೊಬಲಗಿನ ಶೇಕಡಾ ಹತ್ತಕ್ಕೆ ಸಮನಾದ ದಂಡಕ್ಕೆ ಬದ್ಧನಾಗಿರತಕ್ಕದ್ದು.

xx xx xx

ಮೂರನೇ ಅನುಸೂಚಿ

ಶೇಕಡಾ ನಾಲ್ಕರ ದರದಲ್ಲಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳು

[4(1) (ಎ) (ii)ನೇ ಪ್ರಕರಣ]

[ಪ್ರಕರಣ4(1) (ಸಿ) ಕ್ರಮ ಸಂಖ್ಯೆ	ಕಾಮಗಾರಿಗಳ ಕರಾರಿನ ವಿವರಣೆ	ತೆರಿಗೆಯ ದರ
1	2	3
1.	ಕೈಯಿಂದ ನಡೆಸದಿರುವ ಅಥವಾ ಪ್ರಾಣಿಗಳಿಂದ ಎಳೆಸದಿರುವ ಕೃಷಿ ಉಪಕರಣಗಳು	
2.	ಹಾರು ಬೂದಿ (ಫ್ಲೈ ಆ್ಯಷ್) ಇಟ್ಟಿಗೆಗಳು, ರಿಫ್ರ್ಯಾಕ್ಟರಿ ಇಟ್ಟಿಗೆಗಳು ಮತ್ತು ಅಂತಹವುಗಳನ್ನು ಒಳಗೊಂಡಂತೆ ಎಲ್ಲಾ ಬಗೆಯ ಇಟ್ಟಿಗೆಗಳು, ಡಾಂಬರು ಲೇಪಿತ ಮೇಲ್ಛಾವಣಿ ಹಾಳೆಗಳು, ಮಣ್ಣಿನ ಹಂಚುಗಳು	

xx xx xx

ಆರನೇ ಅನುಸೂಚಿ

[ಪ್ರಕರಣ 4(1) (ಸಿ)]

ಕ್ರ ಸಂ.	ಕಾಮಗಾರಿಗಳ ಕರಾರಿನ ವಿವರಣೆ	ತೆರಿಗೆಯ ದರ
1	2	3
1	ಸರಕುಗಳ ಬಾಟ್ಲಿಂಗ್, ಕ್ಯಾನಿಂಗ್ ಮತ್ತು ಪ್ಯಾಕಿಂಗ್	ಶೇಕಡಾ ನಾಲ್ಕು
2	ಬಟ್ಟೆಗಳಿಗೆ ಬಣ್ಣ ಹಾಕುವುದು ಮತ್ತು ಪ್ರಿಂಟ್ ಮಾಡುವುದು	ಶೇಕಡಾ ನಾಲ್ಕು
3	ಇಲೆಕ್ಟ್ರೋ ಪ್ಲೇಟಿಂಗ್, ಇಲೆಕ್ಟ್ರೋ ಗಾಲ್ವನೈಸಿಂಗ್, ಆ್ಯನೋಡೈಜಿಂಗ್ ಮತ್ತು ಅಂಥವೇ	ಶೇಕಡಾ ನಾಲ್ಕು

4	ಕಬ್ಬಿಣದ ಆಸರೆ ಕಟ್ಟುಗಳು, ಉದ್ದಸರಗಳು, ಇತ್ಯಾದಿಗಳ ನಿರ್ಮಾಣ ಸರಬರಾಜು ಮತ್ತು ಕಟ್ಟುವಿಕೆ ಒಳಗೊಂಡು ರಚನಾ ಕಾಮಗಾರಿಗಳ ನಿರ್ಮಾಣ ಮತ್ತು ಕಟ್ಟುವಿಕೆ,	ಶೇಕಡಾ ನಾಲ್ಕು
5	ಮೂರನೇ ಅನುಸೂಚಿಯಲ್ಲಿನ 20ನೇ ಕ್ರಮ ಸಂಖ್ಯೆಯಲ್ಲಿ ನಿರ್ದಿಷ್ಟ ಪಡಿಸಿದ ಬಂಡವಾಳ ಸರಕುಗಳ ನಿರ್ಮಾಣ ಅಥವಾ ಸರಬರಾಜು ಮತ್ತು ಸ್ಥಾಪನೆ	ಶೇಕಡಾ ನಾಲ್ಕು
6	ಪೌಡರ್ ಕೋಟಿಂಗನ್ನು ಒಳಗೊಂಡಂತೆ ಲ್ಯಾಮಿನೇಷನ್, ರಬ್ಬರೈಸೇಷನ್, ಕೋಟಿಂಗ್ ಮತ್ತು ಅಂಥವೇ ಸಂಸ್ಕರಣ	ಶೇಕಡಾ ನಾಲ್ಕು
7	ಅಮೂಲ್ಯ ಅಥವಾ ಅರೆ ಅಮೂಲ್ಯ ಹರಳು ಗಳನ್ನು ಹುದುಗಿಸಿರಲಿ ಅಥವಾ ಹುದುಗಿಸಿರ ದಿರಲಿ ಚಿನ್ನದ, ಬೆಳ್ಳಿಯ ಮತ್ತು ಇತರೆ ಅಮೂಲ್ಯ ಲೋಹದ ಒಡವೆಗಳು ಮತ್ತು ವಸ್ತುಗಳ ತಯಾರಿಕೆ ಅಥವಾ ಸಂಸ್ಕರಣ ಮತ್ತು ಸರಬರಾಜು.	ಶೇಕಡಾ ನಾಲ್ಕು
8	ಮುದ್ರಣ ಮತ್ತು ಬ್ಲಾಕ್ ತಯಾರಿಕೆ	ಶೇಕಡಾ ನಾಲ್ಕು
9	ಫೋಟೋಗ್ರಾಫ್ಸ್, ಫೋಟೋ ಪ್ರಿಂಟ್ಸ್ ಮತ್ತು ಫೋಟೋ ನೆಗೆಟಿವ್‌ಗಳ ಸಂಸ್ಕರಣ ಮತ್ತು ಸರಬರಾಜು.	ಶೇಕಡಾ ನಾಲ್ಕು
10	ಸಿನಿಮಾಟೋಗ್ರಾಫಿಕ್ ಫಿಲ್ಮ್‌ಗಳ ಸಂಸ್ಕರಣ ಮುದ್ರಣ ಮತ್ತು ಸರಬರಾಜು.	ಶೇಕಡಾ ನಾಲ್ಕು
11	ಕಂಪ್ಯೂಟರ್ ಸಾಫ್ಟ್‌ವೇರ್ ಪ್ರೋಗ್ರಾಮಿಂಗ್ ಮತ್ತು ಅದನ್ನು ಒದಗಿಸುವುದು	ಶೇಕಡಾ ನಾಲ್ಕು
12	ಪ್ಲಂಬಿಂಗ್‌ಗಾಗಿ, ಚರಂಡಿಗಾಗಿ ಮತ್ತು ಅಂಥ ಕಾರ್ಯಗಳಿಗಾಗಿ ಹೊರತು ಇತರೆ ಉದ್ದೇಶ ಗಳಿಗಾಗಿ ಸ್ಟೀಲ್ ಪೈಪ್‌ಗಳನ್ನು ಒದಗಿಸುವುದು ಮತ್ತು ಜೋಡಿಸುವುದು.	ಶೇಕಡಾ ನಾಲ್ಕು

13	ಎಲೆಕ್ಟ್ರಿಕಲ್ ಮೋಟಾರುಗಳ ರೀವೈಂಡಿಂಗ್	ಶೇಕಡಾ ನಾಲ್ಕು
14	ಮೂರನೇ ಅನುಸೂಚಿಯ 53ನೇ ಕ್ರಮ ಸಂಖ್ಯೆಯಲ್ಲಿ ನಿರ್ದಿಷ್ಟಪಡಿಸಿದ ಟೆಲಿಕಮ್ಯೂನಿಕೇಷನ್ ಸಾಧನ ಸಲಕರಣೆಗಳೂ ಸೇರಿದಂತೆ ಐ.ಟಿ. ಉತ್ಪನ್ನಗಳ ಸರ್ವೀಸ್ ಮತ್ತು ನಿರ್ವಹಣೆ	ಶೇಕಡಾ ನಾಲ್ಕು
15	ನೂಲಿನ ಸೈಜಿಂಗ್ ಮತ್ತು ಬಣ್ಣ ಹಾಕುವುದು	ಶೇಕಡಾ ನಾಲ್ಕು
16	ಎಲೆಕ್ಟ್ರಿಕಲ್ ಟ್ರಾನ್ಸ್‌ಮಿಷನ್ ಟವರ್‌ಗಳ ಸರಬರಾಜು ಮತ್ತು ನಿರ್ಮಾಣ	ಶೇಕಡಾ ನಾಲ್ಕು
17	ಷಾಬಾದ್ ಸ್ಲ್ಯಾಬುಗಳು ಮತ್ತು ಕಲ್ಲುಗಳ ಸರಬರಾಜು ಮತ್ತು ಜೋಡಣೆ	ಶೇಕಡಾ ನಾಲ್ಕು
18	ಸೆಂಟ್ರಿಫ್ಯುಗಲ್ ಮನೋಬ್ಲಾಕ್ ಮತ್ತು ಸಬ್ ಮರ್ಸಿಬಲ್ ಪಂಪ್‌ಸೆಟ್ಟುಗಳ ಸರಬರಾಜು ಮತ್ತು ಜೋಡಣೆ	ಶೇಕಡಾ ನಾಲ್ಕು
19	ದಪ್ಪ ಜಲ್ಲಿ ಕಲ್ಲುಗಳ ಸರಬರಾಜು ಮತ್ತು ಹರಡುವುದು.	ಶೇಕಡಾ ನಾಲ್ಕು
20	ಪುನರ್ನವೀಕರಿಸಬಹುದಾದ ಊರ್ಜಶಕ್ತಿ ಉಪಕರಣಗಳ ಸರಬರಾಜು, ನಿರ್ಮಾಣ, ಸ್ಥಾಪನೆ ಮತ್ತು ಕಾರ್ಯಪಾಲನೆ	ಶೇಕಡಾ ನಾಲ್ಕು
21	ಟೈರು ರಿಟ್ರೆಡ್ಡಿಂಗ್	ಶೇಕಡಾ ನಾಲ್ಕು
22	ಮೇಲಿನ ಎರಡು ಅಥವಾ ಹೆಚ್ಚಿನ ಪ್ರವರ್ಗಗಳನ್ನು ಒಳಗೊಂಡ ಸಂಯೋಜಿತ ಕರಾರುಗಳು	ಶೇಕಡಾ ನಾಲ್ಕು
23	ಮೇಲಿನ ಒಂದು ಅಥವಾ ಹೆಚ್ಚಿನ ಪ್ರವರ್ಗಗಳೊಂದಿಗೆ ಸಂಯೋಜಿತ ಕರಾರುಗಳೂ ಸೇರಿದಂತೆ ಮೇಲಿನ ಯಾವುದೇ ಪ್ರವರ್ಗಗಳಲ್ಲಿ ನಿರ್ದಿಷ್ಟ ಪಡಿಸದಿರುವ ಇತರ ಎಲ್ಲಾ ಕಾಮಗಾರಿಗಳ ಕರಾರು.	ಶೇಕಡಾ ನಾಲ್ಕು

ವಿವರಣೆ: ಈ ಅನುಸೂಚಿಯಲ್ಲಿನ ಯಾವುದೇ ಕ್ರಮಸಂಖ್ಯೆಯಲ್ಲಿ ನಿರ್ದಿಷ್ಟಪಡಿಸಿದ ಕಾಮಗಾರಿಗಳ ಕರಾರು ಅಭಿವೃದ್ಧಿ, ಮಾರ್ಪಾಟುಗಳು ಅಥವಾ ದುರಸ್ತಿಗಳನ್ನು ಮಾಡುವುದಕ್ಕಾಗಿನ ಕಾಮಗಾರಿ ಕರಾರುಗಳನ್ನು ಒಳಗೊಳ್ಳತಕ್ಕದ್ದು.

xx xx xx

ಅನುಬಂಧ – IV

ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕ, 2010
(2010ರ ವಿಧಾನಸಭೆಯ ವಿಧೇಯಕ ಸಂಖ್ಯೆ 13)

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ 1957ನ್ನು (1957ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಇದು ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ,–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು **ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ಅಧಿನಿಯಮ, 2010** ಎಂದು ಕರೆಯತಕ್ಕದ್ದು.

(2) ಇದು 2010ನೇ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. 9ನೇ ಪ್ರಕರಣದ ತಿದ್ದುಪಡಿ.– ಕರ್ನಾಟಕ ಸ್ಟಾಂಪು ಅಧಿನಿಯಮ, 1957ರಲ್ಲಿ (1957ರ ಕರ್ನಾಟಕ ಅಧಿನಿಯಮ 34) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 9ನೇ ಪ್ರಕರಣದಲ್ಲಿ, (1)ನೇ ಉಪಪ್ರಕರಣದಲ್ಲಿ,

(1) (ಎ) ಖಂಡದಲ್ಲಿ,–